Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



Rtn. Francesco Arezzo
RI President



Rtn. Palaksha K.
Dist. Governor



Rtn. PHF. I. Narayana
Asst. Governor



Rtn. Koushik Yadiyal
Zonal Lieutenant



40h year of Service and Fellowship

Volume 40 Issue - 23 11th December 2025

ಮುಖ್ಯ ಅತಿಥಿ :

ರೊ. ಕಿಶೋರ್ ಕುಮಾರ್


ಸಂಚಾಲಕರು, ಕಲಾಕ್ಷೇತ್ರ, ಕುಂದಾಪುರ

ರೋಟರಿ ಕ್ಲಬ್ ಕುಂದಾಪುರ


ವಿಷಯ : ಬದುಕಿನಲ್ಲಿ ಸಂಸ್ಕೃತಿ

Time : 7.00 p.m.

Venue : Hotel Shivaprasad Grand, Kundapura



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

## ಸಂಪಾದಕೀಯ :



ನನ್ನೊಲವಿನ ರೋಟರಿ ಮಿತ್ರರೇ,

ಗೋಪಾಲ ಕೃಷ್ಣ ಅಡಿಗರ ಕೃತಿ "ಕಟ್ಟುವೆವು ನಾವು ಹೊಸನಾಡೊಂದನು" ಎಂಬ ಕವಿತೆ ಓದುವಾಗ ಅನ್ನಿಸಿತು ನಾವು ನಿಜವಾಗಲೂ ಅದೃಷ್ಟವಂತರು. ಏಕೆಂದರೆ ನಾವು ನೆಲೆಸಿರುವುದು ಕವಿಗಳು ಸಾಹಿತಿಗಳು ಕಟ್ಟಿರುವ ನಾಡಿನಲ್ಲಿ!. ಕೆಲವರು ಹೇಳುವುದುಂಟು ಈ ಕವಿಗಳು ಸಾಹಿತಿಗಳು ನಮಗೇಕೆ ಬೇಕು? ಅವರಿಂದ ಏನು ಪ್ರಯೋಜನ? ಮಿತ್ರರೇ, ಇಂದು ಈ ಕನ್ನಡ ನಾಡು ಸಾಕ್ಷಾತ್ ಕವಿಗಳು, ಕಾದಂಬರಿಕಾರರು ಹಾಗೂ ಇತರ ಸಾಹಿತಿಗಳ ಹೋರಾಟದಿಂದ. ಹುಯಿಲ ಗೌಳ ನಾರಾಯಣ ರಾಯರು, ಬೇಂದ್ರೆ, ಕುವೆಂಪು, ಅಡಿಗರು, ರಾಜರತ್ನಂ ಇವರುಗಳು ಬರೆದ ಕವಿತೆ ನಾಡಿನ ಯುವಕರನ್ನು ಹುಚ್ಚೆಬ್ಬಿಸಿ ಕರ್ನಾಟಕ ರಾಜ್ಯಕ್ಕಾಗಿ ಹೋರಾಟಕ್ಕಿಳಿಯುವಂತೆ ಮಾಡಿತು. ಮಾ. ರಾಮಮೂರ್ತಿ ಕನ್ನಡ ಬಾವುಟವನ್ನು ವಿನ್ಯಾಸಗೊಳಿಸಿ ತಮ್ಮ ಬರಹಗಳಿಂದ ಹೋರಾಟಕ್ಕೆ ಹುರುಪನ್ನು ಕೊಟ್ಟರು. ನಾರಾಯಣ ರಾಯರ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಹಾಡನ್ನು ಪಿ. ಕಾಳಿಂಗ ರಾಯರು ನಾಡಿನ ಮೂಲೆ ಮೂಲೆಯಲ್ಲಿ ಹಾಡಿ ಉತ್ತೇಜಿಸಿದರು. ಎಲ್ಲವಕ್ಕೂ ವೀರ ಶೌರ್ಯಕ್ಕೆ ಮುನ್ನುಡಿಯಿಟ್ಟಿದ್ದು ಅಡಿಗರ ಕಟ್ಟುವೆವು ನಾವು ಹೊಸ ನಾಡೊಂದನು! ಈ ಕವಿತೆ ಓದಿದಂತೆ ಎಂಥಹಾ ಕೈಲಾಗದವನೂ ಸೆಟೆದು ನಿಂತು ಹೋರಾಟಕ್ಕೆ ಇಳಿಯುತ್ತಾನೆ. ಈ ಕವಿತೆಯ ಸಾಲು ಇಂತಿದೆ

ಕಟ್ಟುವೆವು ನಾವು ಹೊಸ ನಾಡೊಂದನು – ರಸದ ಬೀಡೊಂದನು
ಹೊಸನೆತ್ತರುಕ್ಕುಕ್ಕಿ ಆರಿಹೋಗುವ ಮುನ್ನ,
ಹರೆಯದೀ ಮಾಂತ್ರಿಕನ ಮಾಟ ಮುಸುಳುವ ಮುನ್ನ,
ಉತ್ಸಾಹಸಾಹಸದ ಉತ್ತುಂಗ ವೀಚಿಗಳ
ಈ ಕ್ಷುಬ್ಧ ಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು!

ನಾಡೇನೋ ಕಟ್ಟಿಯಾಯಿತು ಆದರೆ ಆ ಪುಣ್ಯಾತ್ಮರ ಕನಸಿನಂತೆ ಇದುವರೆಗೂ ಪರಿಪೂರ್ಣವಾಗಿಲ್ಲ ಅವರ ಕನಸನ್ನು ನನಸಾಗಿಸಲು ನಾವು ಇನ್ನಾದರೂ ಜಾತಿ ಮತ ಬೇಧವಿಲ್ಲದ ಸಮಾನ ನಾಗರೀಕರಿರುವ ಸಹಕಾರ, ಸಹಬಾಳ್ವೆ ಸಾಮರಸ ಹೊಂದಿರುವ ಹಸಿರಿನಿಂದ ಕಂಗೊಳಿಸುವ ನಿತ್ಯ ಹರಿದ್ವರ್ಣ ನಾಡನ್ನಾಗಿಸುವಲ್ಲಿ ಶ್ರಮಿಸೋಣ. ಈ ಗತಿಸಿದ ಹುತಾತ್ಮರ ಕನಸು ನನಸಾಗಿಸುವಂತಾಗಲಿ ಎಂದು ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ನವೆಂಬರ್ ನಲ್ಲೇ ನಮ್ಮ ರೋಟರಿ ಸದಸ್ಯರಿಗೆ ಶುಭಾಷಯ ಹೇಳುವುದು ಮರೆತು ಇಂದು ಹಾರೈಸುತ್ತಿದ್ದೇನೆ.

**– ರೊ. ರಮಾನಂದ ಕಾರಂತ್**

## ವಾರದ ಸಭೆಯ ವರದಿ




ತಾ|04/12/2025 ರಂದು ನಡೆದ ನಮ್ಮ ವಾರದ ಸಭೆ ಕ್ಲಬ್ ಅಸೆಂಬ್ಲಿ ಹಾಗೂ ರೋಟರಿ ಕ್ವಿಝ್ ಸ್ಪರ್ದೆಯ ಸಭೆಯಾಗಿತ್ತು. ರೊ. ಶ್ರೀನಿವಾಸ ಶೇಟ್ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಸಭೆ ರೊ. ದೇವರಾಜ್ ಅವರ ಧನ್ಯವಾದದೊಂದಿಗೆ ಮುಕ್ತಾಯಗೊಂಡಿತು. ಸಭೆಯಲ್ಲಿ ರೊ. ಕೃಷ್ಣ ಕಾಂಚನ್ ಸದಸ್ಯರಿಗೆ ಕ್ವಿಝ್ ನಡೆಸಿದರು. ಸಭೆಯಲ್ಲಿ ಮುಂದೆ ಬರುವ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುವ ಬಗ್ಗೆ ಚರ್ಚಿಸಲಾಯಿತು. ಆಗಮಿಸಿದ ಸದಸ್ಯರುಗಳನ್ನು ಅಧ್ಯಕ್ಷ ರೊ. ಸಚಿನ್ ನಕ್ಕತ್ತಾಯ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸ್ತಾ ವಾರದ ವರದಿ ವಾಚಿಸಿದರು. ರೊ. ದೋಮಾ ಚಂದ್ರಶೇಖರ್ ವಾರದ ಚಿಂತನೆ ಮಂಡಿಸಿದರು. ರೊ. ಕೆ.ಕೆ. ಕಾಂಚನ್ ರೋಟರಿ ಮಾಹಿತಿ ತಿಳಿಸಿದರು. ರೊ. ಜೆರಾಲ್ಡ್ ಕ್ರಾಸ್ತಾ ಕಾರ್ಯಕ್ರಮದ ಕೊನೆಯಲ್ಲಿ ಹಾಸ್ಯವನ್ನು ನಡೆಸಿಕೊಟ್ಟರು.

## ದಿವಂಗತ ರೊ. ಕೆ.ಪಿ. ಭಟ್ ಸ್ಮರಣಾರ್ಥ 'ಸವಿತಾ ಫೌಂಡೇಶನ್' ವತಿಯಿಂದ ಹೊಲಿಗೆ ಯಂತ್ರ ವಿತರಣೆ




ಡಿಸೆಂಬರ್ 4, 2025ರಂದು ದಿವಂಗತ ರೊ. ಕೆ.ಪಿ. ಭಟ್ ಅವರ ಸ್ಮರಣಾರ್ಥ ರೋಟರಿ ಮಾಜಿ ಅಧ್ಯಕ್ಷರಾದ ರೊ. ಸತ್ಯನಾರಾಯಣ ಪುರಾಣಿಕ್ ಹಾಗೂ ರೊ. ಸುರೇಖಾ ಪುರಾಣಿಕ್ ಅವರ 'ಸವಿ_ತಾ ಫೌಂಡೇಶನ್' (Savi_Tha Foundation) ಪ್ರಾಯೋಜಕತ್ವದಲ್ಲಿ, ಕಾವ್ರಾಡಿ ನಿವಾಸಿಯಾದ ಶ್ರೀಮತಿ ಸಂಗೀತಾ ಸುರೇಶ್ ಕುಲಾಲ್ ಅವರಿಗೆ ಹೊಲಿಗೆ ಯಂತ್ರವನ್ನು ವಿತರಿಸಲಾಯಿತು.

ದಿವಂಗತ ರೊ. ಕೆ.ಪಿ. ಭಟ್ ಅವರ ನಿವಾಸದಲ್ಲಿ ನಡೆದ ಈ ಸರಳ ಸಮಾರಂಭದಲ್ಲಿ, ದಿವಂಗತ ಕೆ.ಪಿ. ಭಟ್ ಅವರ ಧರ್ಮಪತ್ನಿ ಶ್ರೀಮತಿ ಶೋಭಾ ಭಟ್‌ರುವರು ಫಲಾನುಭವಿಗೆ ಯಂತ್ರವನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ರೋಟರಿ ಅಧ್ಯಕ್ಷರಾದ ರೊ. ಸಚಿನ್ ನಕ್ಕತ್ತಾಯ, ದಿವಂಗತ ಕೆ.ಪಿ. ಭಟ್ ಅವರ ಪುತ್ರಿ ಡಾ. ದೀಪಾ ಭಟ್ ಹಾಗೂ ಪ್ರಾಯೋಜಕರಾದ ರೊ. ಸತ್ಯನಾರಾಯಣ ಪುರಾಣಿಕ್ ಮತ್ತು ರೊ. ಸುರೇಖಾ ಪುರಾಣಿಕ್ ಅವರು ಉಪಸ್ಥಿತರಿದ್ದರು.

ಈ ಸಮಾಜಮುಖಿ ಕಾರ್ಯಕ್ಕೆ 'ಸವಿ_ತಾ ಫೌಂಡೇಶನ್' ಮೂಲಕ ಹೊಲಿಗೆ ಯಂತ್ರವನ್ನು ಪ್ರಾಯೋಜಿಸಿದ ರೊ. ಸತ್ಯನಾರಾಯಣ ಪುರಾಣಿಕ್ ಹಾಗೂ ರೊ. ಸುರೇಖಾ ಪುರಾಣಿಕ್ ಅವರಿಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಲಾಯಿತು



CERTIFICATE
of Appreciation

Rotary
District 3132

Umesh
Puthran

We are very pleased and deeply honored to present this certificate to you in recognition of your enthusiastic and active participation and successful completion of

RID 3132 Quiz 2.0.18 (Eradicating Polio)

Your dedication to learning Rotary's principles, values, and rich legacy is truly appreciated. Thank you for embracing and promoting the Rotary spirit.

Rtn. Sudhir Lature
District Governor, RID 3132 | RY 25-26


Rtn. Avinash Mathapati
Dist. Chair, Rotary Information | RY 25-26

Achieved Percentage: 100%

Certificate Awarderd On: 5-12-2025

RID 3132 QUIZ 2.0

### ಹುಟ್ಟುಹಬ್ಬದ ಶುಭಾಶಯಗಳು



ರೊ. ಅಭಿನಂದನ್ ಎ. ಶೆಟ್ಟಿ
ದಿನಾಂಕ : ಡಿಸೆಂಬರ್ 12
ಮೊಬೈಲ್ : 9844065100

### ಕಳೆದ ವಾರದ ಚಿಂತನೆ

"ನಿಮ್ಮ ಜೀವನದಲ್ಲಿ ಒಂದು ದಿನಕ್ಕೂ ವಿಷಾದಿಸಬೇಡಿ, ಒಳ್ಳೆಯ ದಿನಗಳು ಸಂತೋಷವನ್ನು ನೀಡುತ್ತವೆ, ಕೆಟ್ಟ ದಿನಗಳು ಅನುಭವವನ್ನು ನೀಡುತ್ತವೆ, ಅತೀ ಕೆಟ್ಟ ದಿನಗಳು ಪಾಠಗಳನ್ನು ನೀಡುತ್ತವೆ ಮತ್ತು ಉತ್ತಮ ದಿನಗಳು ನೆನಪುಗಳನ್ನು ನೀಡುತ್ತವೆ."

ನೀಡಿದವರು –
ರೊ. ದೋಮ ಚಂದ್ರಶೇಖರ

**Rotary Information**

## Around The Wheel

The RI Board may suspend or terminate a Rotary Club or a Rotaract Club if it

- fails to pay its dues or other financial obligations to RI or required levy to the District fund.
- retains a member or Rotaractor who violates stewardship policies of TRF
- retains a member or Rotaractor who initiates or maintains litigation against RI or TRF, including their Directors, Trustees, Officers, agents, and employees, before exhausting all remedies in the constitutional documents or
- fails to appropriately address any youth-protection allegations against a member or Rotaractor in connection with Rotary-related youth programs.



Rtn. Dr. S. N. Padiyar 1985-86 & 1986-87 | Rtn. B. Arun Kumar Shetty 1987-88 | Rtn. Dr. H. Rammohan 1988-89 | Rtn. K. Shridhar Kamath 1989-90 | Rtn. Dr. Anand Nayak 1990-91 | Rtn. B. Ramachandra Prabhu 1991-92 | Rtn. G. Santhosh Kumar Shetty 1992-93 | Rtn. Dr. H. A. Vishweshwar 1993-94 | Rtn. Dr. H. R. Hebbar 1994-95



Rtn. K. T. Surendranath
1995-96



Rtn. S. Sadananda Chatra
1996-97



Rtn. B. C. Somayaji
1997-98



Rtn. K. Suresh Kamath
1998-99




ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಇದರ ವತಿಯಿಂದ,ಕುಂದಾಪುರ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅಪೌಷ್ಟಿಕತೆಯಿಂದ ಬಳಲುತ್ತಿರುವ ರೋಗಿಗಳಿಗೆ, ಪೌಷ್ಟಿಕಾಂಶಯುಕ್ತ ಆಹಾರ ವಿತರಣೆ ಅಂಗವಾಗಿ ಗರ್ಭಿಣಿ ಸ್ತ್ರೀಯರಿಗೆ, 3,000 ರೂ. ಮೌಲ್ಯದ ಪ್ರೋಟೀನ್ ಪೌಡರ್, ಹಾಲಿನ ಪುಡಿ ಮತ್ತು ಮೊಟ್ಟೆಗಳನ್ನು ನೀಡಲಾಯಿತು. ಕ್ಲಬ್‌ನ ಅಧ್ಯಕ್ಷ ರೊ. ಸಚಿನ್ ನಕ್ಕತ್ತಾಯ ಮತ್ತು ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸ್ತಾ ಉಪಸ್ಥಿತರಿದ್ದರು.



Rtn. S. Subraya Halambi
1999-2000



Rtn. S. Vijaya Shetty
2000-01

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ.14–12–2025ನೇ ಆದಿತ್ಯವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ಡಾ. ಹೆಚ್. ಎ. ವಿಶ್ವೇಶ್ವರ ಮತ್ತು ಆ್ಯನ್ ಡಾ. ವನಿತಾಲಕ್ಷ್ಮಿಯವರಿಗೆ ಕ್ಲಬ್ಬಿನ ಸದಸ್ಯರ ಪರವಾಗಿ ಶುಭಾಶಯಗಳು.

ಮೊಬೈಲ್ : 9448869987

## THE ROTARY 4-WAY TEST

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

*This Bulletin is sponsored by :*

**Rtn. Prakash Shetty**
**Mob. : 9164513774**

For Private Circulation only

Email id – rotaryclub.kundapurasouth@gmail.com



Rtn. K. Seetharama Nackathaya
2001-02



Rtn. U. S. Shenoy
2002-03



Rtn. Dr. Umesh Puthran
2003-04



Rtn. Dr. B. V. Udupa
2004-05



Rtn. A. Shantharam Pai
2005-06



Rtn. K. Shantharam Prabhu
2006-07



Rtn. T. Raghavendra Hatwar 2007-08 | Rtn. K. Shankar 2008-09 | Rtn. S. Jayakar Shetty 2009-10 | Rtn. K. K. Kanchan 2010-11 | Rtn. Abhinandan A. Shetty 2011-12 | Rtn. Vivian Crasto 2012-13 | Rtn. G. Shreedhar Shetty 2013-14 | Rtn. K. P. Bhat 2014-15 | Rtn. P. Vasudeva Karanth 2015-16



Rtn. Aouzline F. Rebello 2016-17 | Rtn. J. Srinath Rao 2017-18 | Rtn. Johnson D' Almeida 2018-19 | Rtn.Devaraj 2019-20 | Rtn. Dr. Uttam Kumar Shetty 2020-21 | Rtn.Mahendr Shetty 2021-22 | Rtn.Sathyanarayana Puranik 2022-23 | Rtn.Suresh Mallya 2023-24 | Rtn. Judith Mendonca 2024-25